# ಬೆಳೆದಿದೆ ನೋಡಾ ಬೆಂಗಳೂರು ನಗರ

**ಮನುಷ್ಯನ ಬಕಾಸುರ ಬಯಕೆಗಳ ಮೂರ್ತರೂಪದಂತೆ ಬೆಂಗಳೂರು ಮಹಾನಗರ ತನ್ನ ದೇಹವನ್ನು ಹಿಗ್ಗಲಿಸಿಕೊಳ್ಳುತ್ತಲೇ ಇದೆ. ದಶಕಗಳ ಹಿಂದಿನ ಬೆಂಗಳೂರನ್ನು ಕಂಡವರಿಗೆ ಇಂದಿನ ಬೆಂಗಳೂರು ಉಸಿರುಗಟ್ಟಿಸುವ ಕಿಷ್ಕಿಂಧೆ. ಬೆಂಗಳೂರಿನ ಕುರಿತ 'ಈಸ್ಟ್‌ಮನ್ ಕಲ್ಲರ್' ನೆನಪುಗಳ ಈ ಬರಹ, ಬೆಂಗಳೂರಿನ ಬಾಲ್ಯ–ತಾರುಣ್ಯಗಳ ನವಿರು ನೆನಪುಗಳ ನೇವರಿಕೆ.**

■ ಪದ್ಮಾ ಶ್ರೀರಾಮ




ಇತ್ತೀಚೆಗೆ ನಮ್ಮ ಸ್ನೇಹಿತರೊಬ್ಬರು, 'ಬೆಂಗಳೂರಿನ ಕಡೆಗೆ ಬಂದಾಗ ತಪ್ಪದೆ ನಮ್ಮಲ್ಲಿಗೆ ಬನ್ನಿ' ಎಂದು ಆಹ್ವಾನಿಸಿದರು. ಅವರ ಮನೆ ನಾಗರಬಾವಿಯಲ್ಲಂತೆ! ತನ್ನ ಗೊತ್ತಿನ ಕೊಟ್ಟಿಗೆಗೆ ತೆರಳುವ ಹಸುವಿನಂತೆ ನನಗೆ ಗೊತ್ತಿದ್ದ ತಾವಿಗೆ ಹೋಗುತ್ತಿದ್ದ ನಾನು ಕಣ್ಣು ಕಣ್ಣು ಬಿಟ್ಟೆ.

ಈಗಿನ ಬೆಂಗಳೂರು ಮೊದಲಿನ ಹಾಗಲ್ಲ. ಕಲ್ಲು ಎಸೆದ ಕಡೆ ಒಂದು 'ಲೇ ಔಟ್', ಅಲ್ಲಿ ಪಿತಗುಡುವ ಜನ! ಇದು ವಿಸ್ತರಿಸುವ, ವೇಗದ, ಧಾವಂತದ ಯುಗ. ಅದರಂತೆ ಬೆಂಗಳೂರು ಸಾಗಿಸುತ್ತಿದೆ ನಿಲ್ಲದ ಪಯಣ.

ಇಂದು ಬೆಂಗಳೂರೆಂದರೆ ಸಾಕು, ನನ್ನ ಕಣ್ಣ ಮುಂದೆ ದಶಕಗಳ ಹಿಂದಿನ ಬೆಂಗಳೂರಿನ ಚಿತ್ರ ಮೂಡುತ್ತದೆ. ಏಕೆಂದರೆ ನನ್ನ ಬಾಲ್ಯ ಮತ್ತು ವಿದ್ಯಾಭ್ಯಾಸದ ಸುಮಾರು ದಿನಗಳನ್ನು ಅಲ್ಲಿ ಕಳೆದಿದ್ದೇನೆ. ಆಗಲೂ ನಮ್ಮೂರಿಂದ ರೈಲು, ಬಸ್ಸು, ಕಾರುಗಳಲ್ಲಿ ಬೆಂಗಳೂರಿಗೆ ಬರಬಹುದಿತ್ತು. ಕಾರಿನಲ್ಲಿ ಚನ್ನರಾಯಪಟ್ಟಣ, ಕುಣಿಗಲ್‌ಗಳನ್ನು ದಾಟಿ, ನೆಲಮಂಗಲದಾಚೆ ಹಿಪ್ಪೆಮರಗಳ ಸಾಲನ್ನು ದಾಟಿ, ಬೆಂಗಳೂರಿನ ಹೊರವಲಯದಲ್ಲಿ ಆಗ ತಾನೆ ನಿರ್ಮಾಣವಾಗುತ್ತಿದ್ದ ಗೋಪಾಲ್ ಥಿಯೇಟರ್ ಹಾದು ಮಲ್ಲೇಶ್ವರದ ಮೂಲಕ ಆನಂದ್‌ರಾವ್ ಸರ್ಕಲ್ಲಿನಲ್ಲಿದ್ದ ಮಾಡರ್ನ್ ಹಿಂದೂ ಹೋಟೆಲ್ ಅನ್ನು ಮುಟ್ಟಿ ಬಿಟ್ಟರೆ ಸಾಕು – ನಮ್ಮ ಹೆವನ್ಲಿ ಅಬೋಡ್‌ಗೆ ಬಂದಂತೆ! ಈ ಹೋಟೆಲ್ ಒಂದು ಕೇಂದ್ರ. ಇಲ್ಲಿಂದ ರೇಸ್‌ಕೋರ್ಸ್, ಮಹಾರಾಣಿ ಕಾಲೇಜು, ಅನೇಕ ಸರ್ಕಾರಿ ಆಫೀಸ್‌ಗಳು, ಜೈಲು! ಚಿತ್ರನಗರಿ ಗಾಂಧಿನಗರ, ಎಡವಿದರೆ ಒಂದು ಸಿನಿಮಾ ಮಂದಿರ ಇತ್ಯಾದಿಗಳೆಲ್ಲವೂ ಇಲ್ಲಿಗೆ ಸಮೀಪವಾಗಿತ್ತು.

'ಹೆವನ್ಲಿ ಅಬೋಡ್' ಬಗ್ಗೆ ನಂತರ ಹೇಳುತ್ತೇನೆ. ಮೊದಲಿಗೆ, ಅಂದು ಬೆಂಗಳೂರಿನ ಸುತ್ತಮುತ್ತ ಹೇಗಿತ್ತು ನೋಡುವ. ಅಂದಿನ ಮಲ್ಲೇಶ್ವರ, ಪ್ಯಾಲೇಸ್ ಗುಟ್ಟಹಳ್ಳಿ, ಗವಿಪುರಂ ಗುಟ್ಟಹಳ್ಳಿ, ಚಾಮರಾಜಪೇಟೆ, ಬಸವನಗುಡಿ, ಕಂಟೋನ್ಮೆಂಟ್ ಇತ್ಯಾದಿಗಳೆಲ್ಲವು ನಮ್ಮ ಅಳವಿನಲ್ಲಿದ್ದವು. ಈಗ ಗೊರಗುಂಟೆ ಪಾಳ್ಯ, ಪೀಣ್ಯ, ಸುದ್ದಗುಂಟೆ ಪಾಳ್ಯ, ಜಯನಗರ, ಬನಶಂಕರಿ, ರಾಜಾಜಿನಗರ, ಎಚ್.ಎಸ್. ಆರ್. ಲೇಔಟ್, ಸರ್ಜಾಪುರ, ಹಲಸೂರು, ಕೃಷ್ಣರಾಜಪುರಂ, ಟಿನ್ ಫ್ಯಾಕ್ಟರಿ, ರಾಮಮೂರ್ತಿ ನಗರ, ಕಾಕ್ಸ್‌ಟೌನ್, ಟ್ಯಾಸ್ಕರ್‌ಟೌನ್, ಶೂಲೆ, ಇನ್ನೂ ಏನೇನೊ! ನಮ್ಮ ಚಿಕ್ಕಂದಿನಲ್ಲಿ ಅಶೋಕ ಪಿಲ್ಲರ್ ಇರುವ ಫಸ್ಟ್ ಬ್ಲಾಕ್ ಜಯನಗರದ ಕೊನೆಯಾಗಿತ್ತು. ಈಗ ಇದು ಮುಂದುವರಿದು ಬನಶಂಕರಿ, ಪದ್ಮನಾಭನಗರ, ಏನೆಲ್ಲ ಬಡಾವಣೆಗಳು. ಆಗ ಬೆಂಗಳೂರಿನ ಪಕ್ಕದಲ್ಲಿ ಸಣ್ಣ ಹಳ್ಳಿಯಂತಿದ್ದ ಯಲಹಂಕ ಈಗ ಬೆಂಗಳೂರಿನ ಒಂದು ಬಡಾವಣೆಯಂತಾಗಿಬಿಟ್ಟಿದೆ! ನಮ್ಮ ಚಿಕ್ಕಂದಿನಲ್ಲಿ ಬೆಳಗಿನ ಹೊತ್ತು ಯಲಹಂಕದ ಮೂಲಕ ನಂದಿಬೆಟ್ಟಕ್ಕೆ ಹೊರಟರೆ, ಆ ಸುಂದರ ಬೆಳಗಿನ ಹೊತ್ತು, ರೈತರು ಏತದ ಬಾವಿಯಿಂದ ತಮ್ಮ ತರಕಾರಿ ಹೂತೋಟಗಳಿಗೆ ನೀರು ಹಾಯಿಸುವ ದೃಶ್ಯ ಚೇತೋಹಾರಿಯಾಗಿತ್ತು! ಆಗ ಬೆಂಗಳೂರಿನ ಸುತ್ತಲಿನ ಯಮಲೂರು, ಮುನಿರೆಡ್ಡಿ ಪಾಳ್ಯ, ಜಕ್ಕೂರು ಮುಂತಾದ ಕಡೆಗಳಲ್ಲಿ, 'ಇಂಗ್ಲಿಷ್ ತರಕಾರಿ' ಎಂದು ಕರೆಸಿಕೊಳ್ಳುತ್ತಿದ್ದ ಕ್ಯಾರೆಟ್, ಕೋಸು, ಬಟಾಣಿ, ಸೀಮೆಬದನೆಗಳನ್ನು ಬೆಳೆದಿರುವುದು ಸಾಮಾನ್ಯ ದೃಶ್ಯವಾಗಿತ್ತು. ಲಾಲ್‌ಬಾಗಿನಲ್ಲಿ ಅಧಿಕಾರ ನಿರ್ವಹಿಸುತ್ತಿದ್ದ ಒಬ್ಬ ಇಂಗ್ಲಿಷ್ ಅಧಿಕಾರಿ ಪ್ರತಿದಿನ ನಸುಕಿನಲ್ಲಿ ಸುತ್ತಲ ಹಳ್ಳಿಗಳಿಂದ ಎತ್ತಿನಗಾಡಿಗಳಲ್ಲಿ ಬೆಂಗಳೂರಿಗೆ ಬರುತ್ತಿದ್ದ ಹಳ್ಳಿಗಳ ಜನರಿಗಾಗಿ ಕಾದು, ಅವರಿಗೆ ಸೀಮೆಬದನೆಕಾಯಿಗಳನ್ನು ಕೊಟ್ಟು 'ಇವುಗಳನ್ನು ಬೆಳೆಯಿರಿ' ಎಂದು ಕೇಳಿಕೊಳ್ಳುತ್ತಿದ್ದನಂತೆ! ತರಕಾರಿ ತೋಟಗಳು ಸೈಟುಗಳಾದವು. ಬಡಾವಣೆಗಳು ತಲೆ ಎತ್ತಿದವು. ಕೆರೆಗಳು ಮಾಯವಾದವು.

ಒಂದು ಕಾಲದಲ್ಲಿ ಬೆಂಗಳೂರು ಕೆರೆಗಳ ನಗರವಾಗಿತ್ತು. ಧರ್ಮಾಂಬುಧಿ ಕೆರೆ, ಅಲಸೂರು ಕೆರೆ, ಹೆಬ್ಬಾಳ ಕೆರೆ, ಸ್ಯಾಂಕಿ ಕೆರೆ, ಇತ್ಯಾದಿ. ಈಗಿನ ಕಾರ್ಪೊರೇಷನ್ ಆಫೀಸಿಗೆ ಹತ್ತಿರವಾಗಿ ಸಂಪಂಗಿ ಕೆರೆ ಇತ್ತು. ಈ ಪುಟ್ಟ ಕೆರೆಯ ಮಧ್ಯೆ ಒಂದು ದೊಡ್ಡ ಬಂಡೆ. ಹುಡುಗರು ಆ ಬಂಡೆಯ ಮೇಲಿಂದ ಹಾರಿ ನೀರಿಗೆ ಬಿದ್ದು ಈಜುತ್ತಿದ್ದರು. ಇದೊಂದು ತೆರೆದ ಸ್ವಿಮಿಂಗ್ ಪೂಲ್ ಆಗಿ ನಮ್ಮ ಬಾಲ್ಯದ ಕಣ್ಣುಗಳಿಗೆ ಅಪೂರ್ವ ದೃಶ್ಯವಾಗುತ್ತಿತ್ತು. ಈಗ ಸಂಪಂಗಿ ನಗರವಿದೆ. ಕೆರೆ ಮಾಯವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಬೆಂಗಳೂರು ಸಿಟಿ ಮತ್ತು ಕಂಟೋನ್ಮೆಂಟ್ ಎಂದು ವಿಭಾಗಿಸಲ್ಪಟ್ಟಿತ್ತು. ಆಗ ಕಂಟೋನ್ಮೆಂಟ್ ಬಿಳಿಯರಿಗೆ, ಸೈನ್ಯಕ್ಕೆ, ಅಲ್ಪಸ್ವಲ್ಪ ನಮ್ಮವರಿಗೆ ಮೀಸಲಾಗಿದ್ದ ಪ್ರದೇಶ. ಮೊದಲು ಬೆಂಗಳೂರಿನ ಸಿಟಿ ಭಾಗದಿಂದ ಕಂಟೋನ್ಮೆಂಟ್‌ಗೆ ಹೋಗಲು ಪರವಾನಗಿ ಬೇಕಿತ್ತಂತೆ. ಸೌತ್ ಪೆರೇಡ್ – ಹಾಗಂದರೇನು? ಆಗ ಕಂಟೋನ್ಮೆಂಟ್‌ನಲ್ಲಿ ಸಿನಿಮಾ ಥಿಯೇಟರುಗಳು, ಮಿಲಿಟರಿ ಕವಾಯಿತಿನ ತಾಣಗಳು ಇದ್ದ ಪ್ರದೇಶವನ್ನು 'ಸೌತ್ ಪೆರೇಡ್' ಎಂದು ಕರೆಯುತ್ತಿದ್ದರು. ಸ್ವಾತಂತ್ರ್ಯ ಪಡೆದ ನಂತರ ಸೌತ್ ಪೆರೇಡ್ ಎಂಬ ಹೆಸರು ಎಂ.ಜಿ. ರೋಡ್ ಅಥವಾ ಮಹಾತ್ಮಗಾಂಧಿ ರಸ್ತೆ ಎಂದಾಯಿತು. ನಾವು ಎಳೆಯರಾಗಿದ್ದಾಗ